**ದಿನಾಂಕಃ 16/12/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಜೆಡಿಆರ್ **ಪರ** ಶ್ರೀ ಜೆ ಎಸ್ ಎನ್ **ವಕೀಲರಿಂದಃ**

1. ಜೆಡಿಆರ್ ರವರ ತಂದೆಯ ಹೆಸರು ಸಣ್ಣತಮ್ಮನಾಯಕ. ಸಣ್ಣತಮ್ಮನಾಯಕ ರವರಿಗೆ ಇಬ್ಬರು ಸಹೋದರರು ಇದ್ದಾರೆ, ಅವರ ಹೆಸರು ಗೊತ್ತಿಲ್ಲ. ಅವರ ಚಿಕ್ಕಪ್ಪನ ಹೆಸರು ದ್ಯಾವನಾಯಕ ಎಂದರೆ ಇರಬಹುದು. ದೇವನಾಯಕ ಮತ್ತು ಸಣ್ಣತಮ್ಮನಾಯಕರವರ ನಡುವೆ ಅವರ ಮನೆ ಆಸ್ತಿಗಳ ವಿಚಾರವಾಗಿ ಜಗಳ ನಡೆಯುತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಣ್ಣತಮ್ಮನಾಯಕರವರಿಗೆ 3 ಜನ ಗಂಡು ಮಕ್ಕಳು. ಅಂದರೆ ಮಹದೇವನಾಯಕ, ಪ್ರಕಾಶ ಮತ್ತು ಹರೀಶ ಎಂಬುವವರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಅವರ ಹೆಸರು ರುಕ್ಮಿಣಿ ಮತ್ತು ರತ್ನಮ್ಮ ಎಂಬುವವರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಜೆಡಿಆರ್ ರವರ ತಾಯಿಯ ಹೆಸರು ಚೆಲುವಮ್ಮ ಎಂದರೆ ಸರಿ. ಅವರ ಕುಟುಂಬಸ್ಥರನ್ನು ಒ.ಎಸ್.343/2022 ರಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದ್ಯಾವನಾಯಕರವರ ಹೆಂಡತಿಯ ಹೆಸರು ಕುಳ್ಳಮ್ಮ ಮತ್ತು ಮಕ್ಕಳ ಹೆಸರು ಸೋಮಶೇಖರ ಮತ್ತು ಸಣ್ಣತಮ್ಮನಾಯಕ ಎಂದರೆ ನನಗೆ ಗೊತ್ತಿಲ್ಲ. ದ್ಯಾವನಾಯಕರವರು ಜೆಡಿಆರ್ ಮತ್ತು ಅವರ ಕುಟುಂಬದವರ ವಿರುದ್ಧ ಭಾಗಾಂಶದ ದಾವೆ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ನೀಡಿರುವ ಆರ್.ಟಿ.ಸಿಗಳನ್ನು ಮೇಲೆ ಹೇಳಿದ ದಾವೆಯಲ್ಲಿ ಭಾಗಾಂಶ ಕೋರಿ ದಾವೆಯನ್ನು ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ಕಾಣಿಸಿರುವ ಹರೀಶ್ ಬಿನ್ ಸಣ್ಣತಮ್ಮನಾಯಕ ಎಂದರೆ ಜೆಡಿಆರ್ ಎಂದರೆ ಸರಿ. ಆ ದಾವೆಯಲ್ಲಿ ಜೆಡಿಆರ್ ಗೆ ಸಮನ್ಸ್ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಆಸ್ತಿಗಳ ವಿರುದ್ಧ ಭಾಗಾಂಶದ ದಾವೆ ಹೂಡಿದ್ದರಿಂದ ಜೆಡಿಆರ್ ರವರಿಗೆ ಸದರಿ ಸ್ವತ್ತುಗಳಲ್ಲಿ ಸ್ವತಂತ್ರವಾದ ಹಕ್ಕಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳ ವಿರುದ್ಧ ದಾವೆ ಇರುವುದರಿಂದ ಜೆಡಿಆರ್ ರವರಿಗೆ ಸದರಿ ಸ್ವತ್ತುಗಳನ್ನು ಮಾರಾಟ ಮಾಡುವ, ಅನುಭವಿಸುವ, ಸಾಲ ತೆಗೆದುಕೊಳ್ಳುವ ಹಕ್ಕು ಇಲ್ಲ

ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹೂಡಿದ ನಂತರ ಜೆಡಿಆರ್ ರವರನ್ನು ವ್ಯವಸಾಯ ಮಾಡಲು ಬಿಡದೇ ಹೊರಹಾಕಿದ್ದಾರೆ ಎಂದರೆ ಸರಿಯಲ್ಲ. ಅವರ ಜೀವನ ನಿರ್ವಹಣೆ ಕಷ್ಟವಾಗಿದೆ ಎಂದರೆ ಸರಿಯಲ್ಲ. ಅಮಲ್ಜಾರಿ ಅರ್ಜಿಯ ಮೊತ್ತವನ್ನು ಕೊಡಲು ಜೆಡಿಆರ್ ರವರು ಶಕ್ತರಲ್ಲ ಎಂದರೆ ಸರಿಯಲ್ಲ. ಸ್ವತಂತ್ರವಾಗಿ ಜೆಡಿಆರ್ ರವರ ಹೆಸರಿನಲ್ಲಿ ಆಸ್ತಿಗಳು ಇಲ್ಲದ ಕಾರಣ ಅವರಿಗೆ ಆದಾಯ ಇಲ್ಲ ಎಂದರೆ ಸರಿಯಲ್ಲ. ಅವರ ಆದಾಯದ ಮೂಲಗಳನ್ನು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**